ಎಂ.ವಿ.ಸಿ. 672/2023
ಪಿ.ಡಬ್ಲ್ಯೂ : 01

ದಿನಾಂಕ 11-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಎಮ್ .ಎನ್.ಎನ್ ವಕೀಲರಿಂದಃ**

ಈ ಹಂತದಲ್ಲಿ ಗೌರವಾನ್ವಿತ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆ ಇಲ್ಲ ಎಂದು ಮನವಿ ಮಾಡಿರುತ್ತಾರೆ. ಆದ್ದರಿಂದ ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕು ಎಂದು ಕೋರಿಕೊಳ್ಳುತ್ತೇವೆ .

**ಪಾಟೀ ಸವಾಲು - 3 ನೇ ಎದುರುದಾರರ ಪರ ಶ್ರೀ ಡಿ.ವಿ.ಎಸ್ ವಕೀಲರಿಂದಃ**

ಅಪಘಾತವು ರಸ್ತೆಯ ಮಧ್ಯ ಭಾಗದಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ, ರಸ್ತೆಯ ಬದಿಯಲ್ಲಿ ಆಗಿರುತ್ತದೆ. ನೀವು ಅಪಘಾತವಾಗಿದೆ ಎಂದು ಹೇಳುವ ದಿನ ಯಾವ ಕಡೆಯಿಂದ ಯಾವ ಕಡೆಯಿಂದ ಹೋಗುತಿದ್ದಿರಿ ಎಂದರೆ ನಾಲ್ಕುಬೀದಿಯಿಂದ ಕಡೆಯಿಂದ ಕಟ್ಟಿಂಗೇರಿ ಕಡೆಗೆ ಹೋಗುತಿದ್ದೆನು. ನಿಮಗೆ ಅಪಘಾತಪಡಿಸಿದೆ ಎಂದು ಹೇಳುವ ವಾಹನವು ಯಾವ ಕಡೆಯಿಂದ ಬಂದಿರುತ್ತದೆ ಎಂದರೆ ನನ್ನ ಹಿಂದಿನಿಂದ ಬಂದಿರುತ್ತದೆ. ನಿಮಗೆ ಎಲ್ಲಿ ಪೆಟ್ಟು ಆಯಿತು ಎಂದರೆ ತಲೆಗೆ ಮತ್ತು ಎಡಕಾಲಿಗೆ ಆಗಿರುತ್ತದೆ . ಅಪಘಾತದ ಪೂರ್ವದಲ್ಲಿ ಮತ್ತು ನಂತರದಲ್ಲಿ ನೀವು ಎಷ್ಟು ಬಾರಿ ಬಿದ್ದಿರುತೀರಿ ಎಂದರೆ ನಾನು ಬಿದ್ದಿರುವುದಿಲ್ಲ. ಅಪಘಾತದಿಂದ ಆಗಿದೆ ಎಂದು ಹೇಳುವ ಎಲ್ಲಾ ಗಾಯಗಳು ವಾಸಿಯಾಗಿರುತ್ತದೆ ಎಂದರೆ ಹೌದು. ನಿಮಗೆ 90 ವಯಸ್ಸು ಆಗಿರುತ್ತದೆಯೇ ಎಂದರೆ 1939 ರಲ್ಲಿ ಜನಿಸಿರುತ್ತೇನೆ . ಅಪಘಾತವಾಗಿದೆ ಎಂದು ಹೇಳುವ ಕಾಲದಲ್ಲಿಯು ನಿಮಗೆ ವಯಸ್ಸು ಆಗಿದ್ದ ಕಾರಣ ನಡೆಯಲು ಆಗುತ್ತಿರಲಿಲ್ಲ ಮನೆಯಲ್ಲಿಯೇ ಕುಳಿತುಕೊಳ್ಳುತಿದ್ದಿರಿ ಎಂದರೆ ಹೌದು . ನಿಮಗೆ ಶಬ್ದವನ್ನು ಕೇಳುವ ಶಕ್ತಿ ಕಡಿಮೆ ಎಂದರೆ ಹೌದು . ಅಪಘಾತವಾಗಿದೆ ಎಂದು ಹೇಳುವ ದಿನ ಮೋಟಾರ ವಾಹನ ಡಿಕ್ಕಿ ಪಡಿಸುವ ತನಕ ನಿಮಗೆ ಅಪಘಾತದ ಬಗ್ಗೆ ತಿಳಿದಿರಲಿಲ್ಲ ಎಂದರೆ

ಸರಿಯಲ್ಲ. ನಿಮಗೆ ಸರಿಯಾಗಿ ನಡೆಯಲು ಆಗುತಿರಲಿಲ್ಲ ಹಾಗೂ ರಸ್ತೆಯ ಮದ್ಯಭಾಗದಲ್ಲಿ ನಡೆದುಕೊಂಡು ಹೋಗುತಿದ್ದಿರಿ ಆದ್ದರಿಂದ ಅಪಘಾತವು ನಿಮ್ಮ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ . ನಿಮ್ಮ ಚಿಕಿತ್ಸೆಗೆ ಎಷ್ಟು ಹಣವು ಖರ್ಚು ಆಗಿದೆ ಎಂದು ಗೊತ್ತಿದೆಯೇ ಎಂದರೆ ಸುಮಾರು 1 ಲಕ್ಷ ರೂಪಾಯಿಗಳಷ್ಟು ಬಿಲ್ಲುಗಳು ಇರುತ್ತದೆ ಅದಕ್ಕೂ ಹೆಚ್ಚು ಖರ್ಚು ಆಗಿರುತ್ತದೆ . ನಿಮಗೆ ಇನ್ಸುರೆನ್ಸ್ ನಿಂದ ವೈದ್ಯಕೀಯ ಖರ್ಚು ಸಿಕ್ಕಿದೆ ಅಲ್ಲವೇ ಎಂದರೆ ಸ್ವಲ್ಪ ಸಿಕ್ಕಿದೆ ಆದರೇ ಎಷ್ಟು ಎಂದು ಗೊತ್ತಿಲ್ಲ. ಎಲ್ಲಾ ವೈದ್ಯಕೀಯ ಖರ್ಚಿನ ಬಿಲ್ಲುಗಳು ಇನ್ಸುರೆನ್ಸ್ ಕಂಪೆನಿಯಿಂದ ದೊರಕಿರುತ್ತದೆ ಎಂದರೆ ಸರಿಯಲ್ಲ. ಅಪಘಾತದಿಂದಾಗಿ ನಿಮಗೆ ಶಾರೀರಿಕವಾಗಿ ಯಾವುದೇ ತೊಂದರೆಯಾಗಿಲ್ಲ ಎಂದರೆ ಸರಿಯಲ್ಲ . ನಿಮಗೆ ನಡೆಯಲು ಆಗುವುದಿಲ್ಲ ಎಂದು ಹೇಳುವುದು ನಿಮ್ಮ ವಯಸ್ಸಿನ ಕಾರಣದಿಂದ ಹೊರತು ಅಪಘಾತದಿಂದ ಆಗಿದೆ ಎಂದು ಹೇಳುವ ಗಾಯಗಳಿಂದ ಅಲ್ಲ ಎಂದರೆ ಸರಿಯಲ್ಲ . 3 ನೇ ಎದುರುದಾರರು ನೀಡಿರುತ್ತಾರೆ ಎಂದು ಹೇಳುವ ವಿಮಾ ಪಾಲಿಸಿಯನ್ನು ಈ ತನಕ ನೀವು ನೋಡಿರುತ್ತೀರಾ ಎಂದರೆ ಇಲ್ಲ. 3 ನೇ ಎದುರುದಾರರು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಿಮ್ಮ ಗೌರವವಾನ್ವಿತ ವಕೀಲರ ಮೂಲಕ ಓದಿಸಿ ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ. ನಿಮಗೆ ಅಪಘಾತಪಡಿಸಿದೆ ಎಂದು ಹೇಳುವ ವಾಹನಕ್ಕೆ 3 ನೇ ಎದುರುದಾರರು 3 ನೇ ಪಕ್ಷಗಾರರ ವಿಮೆಯನ್ನು ನೀಡಿರುವುದಿಲ್ಲ ಎಂದರೆ ಅದು ನನಗೆ ಗೊತ್ತಿಲ್ಲ . ನಿಮಗೆ ಅಪಘಾತಪಡಿಸಿದೆ ಎಂದು ಹೇಳುವ ವಾಹನಕ್ಕೆ ಲಿಬರ್ಟಿ ಜನರಲ್ ಇನ್ಸುರೆನ್ಸ್ ಕಂಪೆನಿಯವರು ವಿಮೆಯನ್ನು ನೀಡಿರುವುದು ಎಂದರೆ ಅದು ನನಗೆ ಗೊತ್ತಿಲ್ಲ . 3 ನೇ ಎದುರುದಾರರು ಅಪಘಾತಪಡಿಸಿದೆ ಎಂದು ಹೇಳುವ ವಾಹನಕ್ಕೆ ಸಂಬಂಧಿಸಿದಂತೆ 3 ಪಕ್ಷಗಾರರ ವಿಮೆ ನೀಡದೇ ಇರುವುದರಿಂದ ಯಾವುದೇ ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ . ಅಪಘಾತಪಡಿಸಿದೆ ಎಂದು ಹೇಳುವ ವಾಹನಕ್ಕೆ ಲಿಬರ್ಟಿ ಜನರಲ್ ಇನ್ಸುರೆನ್ಸ್ ಕಂಪೆನಿಯವರು ವಿಮೆಯನ್ನು ನೀಡಿರುವ ವಿಚಾರ ಗೊತ್ತಿದ್ದರೂ ಸಹ ಉದ್ದೇಶಪೂರ್ವಕವಾಗಿ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ .

ಎಂ.ವಿ.ಸಿ. 672/2023
ಪಿ.ಡಬ್ಲ್ಯೂ : 01

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.